ಮಾಡಿಕೊಳ್ಳಲಿಕ್ಕೆ ಕನ್ನಡದ 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಚಿತ್ರ ನೋಡಬೇಕು. 'ಅಸ್ತು'ವಿನಲ್ಲಿ ಮಗಳ ಮೂಲಕ ಮರೆಗುಳಿ ಅಪ್ಪನ ಕಥನ ಅನಾವರಣಗೊಂಡರೆ, ಗೋಧಿ ಬಣ್ಣದಲ್ಲಿ ಮಗನ ಮೂಲಕ ಕಥನ ಅನಾವರಣಗೊಳ್ಳುತ್ತದೆ. ಹೆಣ್ಣು ಗಂಡಾದುದರಿಂದಲೋ ಏನೋ ಗೋಧಿ ಬಣ್ಣ ಕೊಂಚ ಒರಟಾಗಿದೆ. ಅಲ್ಲಿ ಕೂಡ ಮನುಷ್ಯ ಸಂಬಂಧಗಳ ಬಗ್ಗೆ ಆಸ್ಥೆ ವ್ಯಕ್ತಪಡಿಸಲು ಹೆಣ್ಣೇ ಒದಗಿಬರಬೇಕು. ಅಲ್ಜಮೈರ್ ಬಾಧಿತ ಅಜ್ಜ ಆನೆಯೊಂದನ್ನು ಕಂಡು ಅದರ ಹಿಂದೆ ಹೋಗಿ ಬಯಲಿನಲ್ಲಿ ಅಪೂರ್ವ ಮನುಷ್ಯಲೋಕವನ್ನು ಕಾಣುವುದು 'ಅಸ್ತು'ವಿನ ಕಥೆ. ಕನ್ನಡ ಸಿನಿಮಾದಲ್ಲಿನ ಕಥಾನಾಯಕ ಬಯಲಿನಿಂದ ಮನೆಯ ಚೌಕಟ್ಟಿನೊಳಗೆ ಸಿಕ್ಕಿಕೊಳ್ಳುತ್ತಾನೆ. ಆ ಮಟ್ಟಿಗೆ 'ಗೋಧಿ ಬಣ್ಣ...' ಚಿತ್ರದ ಪರಿಧಿ ಸಣ್ಣದು. 'ಕಳೆದುಹೋಗುವ' ಪರಿಕಲ್ಪನೆಯನ್ನು ಹಲವು ರೂಪಗಳಲ್ಲಿ ಹೇಳುವ ನಿರ್ದೇಶಕರ ಪ್ರಯತ್ನ ಕೂಡ ಚಿತ್ರಕ್ಕೊಂದು ಚೌಕಟ್ಟು ಹಾಕಿಬಿಟ್ಟಿದೆ. ಅಜ್ಜನ ಹೃದ್ಯ ಕಥನದ ಜೊತೆಗೆ ಭೂಗತಲೋಕದ ವ್ಯಕ್ತಿಗಳ ಕಥನವೂ 'ಗೋಧಿ ಬಣ್ಣ'ದಲ್ಲಿ ತಳಕು ಹಾಕಿಕೊಂಡಿದೆ. ಈ ಬದಲಾವಣೆ, ಮುಖ್ಯಕಥನಕ್ಕೆ ಪೂರಕವಾಗಿರುವಂತೆ ಕಾಣಿಸಿದರೂ – 'ಅಸ್ತು'ವಿನ ಶಾಸ್ತ್ರಿಗಳ ಪಾತ್ರದ ಸಂಕೀರ್ಣತೆ ಕನ್ನಡದ ವೆಂಕೋಬರಾವ್‌ಗೆ ದಕ್ಕಿಲ್ಲ ಎನ್ನುವುದನ್ನು ಗಮನಿಸಬೇಕು. ಹೋಲಿಕೆಗಳೇನೇ ಇರಲಿ – ಒಂದು ಅಭಿಜಾತ ಕಲಾಕೃತಿಗೂ ಅದರ ಅನುಸರಣೆಯಲ್ಲಿ ರೂಪುಗೊಳ್ಳುವ ಕೃತಿಗಳಿಗೂ ಇರುವ ವ್ಯತ್ಯಾಸವನ್ನು 'ಅಸ್ತು' ಹಾಗೂ 'ಗೋಧಿ ಬಣ್ಣ'ದ ಹಿನ್ನೆಲೆಯಲ್ಲಿ ನೋಡಬಹುದು.

'ಸಿನಿಮಾ ತಾಂತ್ರಿಕವಾಗಿ ಉತ್ತಮವಾಗಿದೆ' ಎನ್ನುವುದು ಈಚಿನ ದಿನಗಳಲ್ಲಿ ಸಿನಿಮಾ ಕುರಿತ ನಮ್ಮ ಮಾತುಗಳಲ್ಲಿ ಸುಲಭವಾಗಿ ಬಳಕೆಯಾಗುವ ವಿಶೇಷಣ. 'ಯಾವುದು ತಾಂತ್ರಿವಾಗಿ ಉತ್ತಮ?' ಎನ್ನುವುದಕ್ಕೆ 'ಅಸ್ತು' ಒಳ್ಳೆಯ ಉದಾಹರಣೆ. ಸಂಗೀತ, ಛಾಯಾಗ್ರಹಣ, ಮಾತು – ಎಲ್ಲವೂ ಒಂದರೊಳಗೊಂದು ಎಷ್ಟು ಹದವಾಗಿ ಬೆರೆತಿವೆ ಎಂದರೆ, ಅವುಗಳನ್ನು ಬೇರ್ಪಡಿಸಿ ನೋಡಲು ಸಾಧ್ಯವಿಲ್ಲ ಎನ್ನುವಂತಾಗಿದೆ. ಒಂದು ಇನ್ನೊಂದನ್ನು ಮೀರಿಹೋಗಲು ಪ್ರಯತ್ನಿಸದ ಸಹನಡಿಗೆ ಇಲ್ಲಿದೆ.

ಡಾ. ಮೋಹನ ಅಗಾಶೆ ಹಾಗೂ ಇರಾವತಿ ಹರ್ಷೆ ಅವರ ಅಭಿನಯದ ಜುಗಲ್‌ಬಂದಿ ಚಿತ್ರದ ಆಕರ್ಷಕ ಅಂಶಗಳಲ್ಲೊಂದು. ಮನುಷ್ಯಕುಲದ ಕರುಣೆಯನ್ನೆಲ್ಲ ತಮ್ಮ ಕಣ್ಣುಗಳಲ್ಲಿ ತುಂಬಿಕೊಂಡಂತೆ ಕಾಣಿಸುವ ಅಗಾಶೆ ಅವರು ನೋಡುಗರ ಅಂತರಂಗವನ್ನು ಕಲಕಿಬಿಡುತ್ತಾರೆ. ಅಪ್ಪನನ್ನು ಕಳೆದುಕೊಳ್ಳುವ ಹಾಗೂ ಮರಳಿಪಡೆಯುವ ಮಾನಸಿಕ ಸಂಘರ್ಷದ ಪಾತ್ರದಲ್ಲಿ ಇರಾವತಿ ನಟನೆ ಪ್ರಬುದ್ಧವಾದುದು. ಮಾವುತನ ಹೆಂಡತಿಯಾಗಿ, ಅಜ್ಜನಿಗೆ ತಾಯಿಯಾಗಿ ಒದಗಿಬರುವ ಚೆನ್ನಮ್ಮನ ಪಾತ್ರದಲ್ಲಿನ ಅಮೃತಾ ನಟನೆಯೂ ಚೇತೋಹಾರಿಯಾಗಿದೆ.

ಭಾಷಾ ಬಳಕೆ ದೃಷ್ಟಿಯಿಂದಲೂ 'ಅಸ್ತು' ಪ್ರಯೋಗಶೀಲವಾದುದು. ಈ ಮರಾಠಿ ಚಿತ್ರದಲ್ಲಿ ಸಂಸ್ಕೃತ ಹಾಗೂ ಕನ್ನಡ ಬಳಕೆಯಾಗಿರುವ ರೀತಿ ಕುತೂಹಲಕಾರಿ. ಭಾವಕೋಶದಿಂದ ಜಾರಿಹೋದ ಸ್ಮೃತಿಯ ರೂಪದಲ್ಲಿ ಸಂಸ್ಕೃತ ಕಾಣಿಸಿದರೆ, ಭಾಷೆಯ ಚೌಕಟ್ಟುಗಳನ್ನು ಮೀರಿದ ಮನುಷ್ಯ ಸಂಬಂಧಗಳ ರೂಪಕವಾಗಿ ಕನ್ನಡ ಒದಗಿಬಂದಿದೆ. ಕನ್ನಡದ ಗೀತೆಯೊಂದು ವಿಶಿಷ್ಟವಾಗಿ ಬಳಕೆಯಾಗಿರುವುದು ಚಿತ್ರದ 'ದೇಸಿ'ತನವನ್ನು ಗಾಢಗೊಳಿಸಿರುವುದರ ಜೊತೆಗೆ, ಕನ್ನಡಿಗರಿಗೆ ಈ ಚಿತ್ರದ ಬಗ್ಗೆ ವಿಶೇಷ ಪ್ರೀತಿ ಮೂಡಲು ಕಾರಣವಾಗಿದೆ.

ಮರೆವಿನ ಕುರಿತ ನಮ್ಮ ನಂಬಿಕೆಗಳನ್ನು ಪುನರ್ ಪರಿಶೀಲಿಸಿಕೊಳ್ಳಲು ಒತ್ತಾಯಿಸುವ 'ಅಸ್ತು' ದೃಶ್ಯ ಮಾಧ್ಯಮದ ಶಕ್ತಿಯ ಬಗ್ಗೆ ಬೆರಗುಹುಟ್ಟಿಸುವ ಸಿನಿಮಾಗಳಲ್ಲೊಂದು.